ಶ್ರೀಮತಿ ನಾಗಮ್ಮ ಸಿ, ಕೇಶವಮೂರ್ತಿ.— ಹಾಜರಾತಿ ವಿಷಯದಲ್ಲಿ ಕೇವಲ ಉಪಾಧ್ಯಾಯರು ಮಾತ್ರ ಜವಾಬ್ದಾರರಲ್ಲ. ಪ್ರತಿಯೊಂದು ಶಾಲೆಗಳಲ್ಲೂ ಬೆಟರ್‌ಮೆಂಟ್ ಕಮಿಟೀಸ್ ಎಂದು ಮಾಡಿದ್ದೇವೆ. ಆ ಶಾಲೆಯ ಸುತ್ತಮುತ್ತಲಿರತಕ್ಕಂಥ ಕೆಲವು ಮುಖ್ಯಸ್ಥರನ್ನು ಆ ಕಮಿಟಿಯಲ್ಲಿ ಸದಸ್ಯರನ್ನಾಗಿ ಮಾಡಿದ್ದೇವೆ. ಆದ್ದರಿಂದ ಈ ಕಾರ್ಯದಲ್ಲಿ ಅವರೂ ಸಹ ಭಾಗಿಯಾಗಬೇಕಾಗಿರುತ್ತದೆ. ಅದಕ್ಕೋಸ್ಕರವಾಗಿಯೇ ಬೆಟರ್‌ಮೆಂಟ್ ಕಮಿಟೀಸ್ ಎಂದು ಮಾಡಿದ್ದೇವೆ.

Construction of Major Irrigation Projects in the State

828 SRI S. M. SHEERANALY CHANDRASEKHAR (Hosanagar).— Will the Minister of State for Major and Medium Irrigation be pleased to state.

(a) whether the Government is aware that in most of the major irrigation projects the dam construction is completed leaving the channel work incomplete ;

(b) whether the Government is aware that in Hemavathy Project are total atchkat is for two lakhs of acre and now it is irrigating only 25,000 acres ;

(c) whether it is a fact that this is common feature in most of the Projects ;

(d) if so, whether it is not a loss to the ex-chequer,

(e) the reasons for the authorities not taking up both the works simultaneously ?

SRI B. B. CHIMMANAKATTI (Minister of State for Major and Medium Irrigation).—

(a) Yes. Both the dam as well as Channel Work in respect of Major Irrigation will be taken up simultaneusly. Since the entire canal work cannot be completed before the danm works are completed, the channel works remain to be done even after the dam is completed.

(b) The total irrigable area under Hemavathy Project is 6,50,000 acres and the potential created to end of June, 1981 is 33,440 acres.

(c) In Major Irrigation Projects the Channel works extend even beyond the date of completion of the dam and reservoir.

(d) It is a loss to the Ex-chequer.

(e) Though the dam as well as the channel works are taken up simultaneously, the works of the dam being in a limited area will require more funds and the channels being scattered over a long distance cannot be tackled at a time. The creation of the potential some times will also be in stages depending on creation of storages.

The works of the dam as well as the channels cannot be completed simultaneously for want of adequate, funds. With the present financial constraint time lag between dam and canal completion is bound to occur.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸನ್ಮಾನ್ಯ ಅಧ್ಯಕ್ಷರೇ, ನಾನು ಅಂಬಾಜಿ ಸಮಿತಿಯ ಅಧ್ಯಕ್ಷನಾಗಿ ಹಲವಾರು ನೀರಾವರಿ ಯೋಜನೆಗಳನ್ನು ವೀಕ್ಷಿಸಲಾಗಿ ಅಲ್ಲಿ ನಡೆದಿರತಕ್ಕಂಥ ದುರಂತದ ಬಗ್ಗೆ ಉದಾಹರಣಾರ್ಥವಾಗಿ ಹೇಮಾವತಿ ಪ್ರಾಜೆಕ್ಟ್‌ನ ಬಗ್ಗೆ ಮಾತ್ರ ಹೇಳಿದ್ದೇನೆ. ರಾಜ್ಯದ ಎಲ್ಲಾ ಯೋಜನೆಗಳಲ್ಲೂ ಕೂಡ ಇದೇ ರೀತಿ ಆಗಿದೆ. ಸ್ವಾಮಿ, ಚಾನಲ್ ತೋಡಿ ಸುವಂಥಾದ್ದು ನಿಧಾನ ವಾಗುತ್ತದೆಂಬುದು ಗೊತ್ತಿದ್ದೂ ಕೂಡ ಅವನ್ನು ಏತಕ್ಕೆ ಮೊದಲೇ ಪ್ರಾರಂಭಮಾಡಬಾರದಾಗಿತ್ತು ? ಏತಕ್ಕಾಗಿ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿಗಳನ್ನು ನೀವು ಪ್ರಾಜೆಕ್ಟ್‌ನ ಮೇಲೆ ಸುರಿಯುತ್ತೀರಿ. ಅದು ಸರಿಯಾಗಿ ಉಪಯೋಗಕ್ಕೆ ಬಾರದಿದ್ದರೆ ಅದರ ಬಡ್ಡಿ ಹಣವನ್ನು ಕಟ್ಟುವು ದಕ್ಕಾದರೂ ಹಣ ವಾಪಸ್ಸು ಬಾರದಿದ್ದರೆ ಅದರಿಂದ ರೈತರಿಗೆ ಏನು ಉಪಯೋಗವಾದ ಹಾಗಾಯಿತು ? ಸರ್ಕಾರಕ್ಕೆ ಅದರಿಂದ ಏನು ಲಾಭವಾದ ಹಾಗಾಯಿತು ? ಆದುದರಿಂದ ಈ ದುರಂತವನ್ನು ಹೋಗ ಲಾಡಿಸುವುದಕ್ಕೆ ತಾವು ಏನು ಯೋಚನೆ ಮಾಡಿದ್ದೀರಿ ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಮಾನ್ಯ ಅಧ್ಯಕ್ಷರೇ, ಒಂದೇ ಬಾರಿಗೆ ಡ್ಯಾಮ್‌ನ ಕೆಲಸವನ್ನು ಮತ್ತು ಕೆನಾಲ್‌ನ ಕೆಲಸವನ್ನು ತೆಗೆದುಕೊಳ್ಳುವುದಾದರೆ ಬಹುಶಃ ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ಇಲಾಖೆಗಳ ಹಣವನ್ನೂ ನೀರಾವರಿ ಇಲಾಖೆಗೇ ಒದಗಿಸಬೇಕಾಗುತ್ತದೆ. ಆದುದರಿಂದ ನಾವು ಈಗಿರ ತಕ್ಕಂಥ ಹಣದಲ್ಲಿ ಶಾಶ್ವತವಾಗಿ ಮತ್ತು ಒಳ್ಳೆಯ ರೀತಿಯಲ್ಲಿ ಕೆಲಸವಾಗಬೇಕು ಎಂಬ ಉದ್ದೇಶದಿಂದಲೇ ಮೊದಲು ಡ್ಯಾಮನ್ನು ಕಟ್ಟಿ ಅನಂತರ ನೀರಾವರಿ ಪ್ರದೇಶಗಳನ್ನು ವರ್ಷೇ ವರ್ಷೇ ೧೦,೨೦ ಸಾವಿರ ಎಕರೆ ಪ್ರದೇಶಗಳಿಗೆ ವಿಸ್ತರಿಸುತ್ತಾ ಹೋಗಬೇಕು ಎನ್ನುವ ಉದ್ದೇಶದಿಂದ ಕೆನಾಲ್ ವರ್ಕ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ೨-೩ ಕಿಲೋಮಿಟರ್ ಕೆನಾಲ್ ಆಗಬೇಕಾಗಿದ್ದರೆ ಎಷ್ಟು ಎಸ್ಟಿಮೇಟ್ ಆಗುತ್ತದೆಂದು ಲೆಕ್ಕ ಹಾಕಿ ಆ ರೀತಿಯಾಗಿ ಹಣವನ್ನು ಒದಗಿಸಬೇಕಾಗಿರುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಹೇಮಾವತಿ ಯೋಜನೆಯಲ್ಲಿ ಬರತಕ್ಕ ಅಚ್ಚುಕಟ್ಟು ಪ್ರದೇಶ ೬,೫೦,೦೦೦ ಎಕರೆಗಳೆಂದು ಹೇಳಿದ್ದೀರಿ. ಅದರಲ್ಲಿ ೧೯೮೧ರ ಜೂನ್ ಅಂತ್ಯದವರೆಗೆ ನೀವು ಕೊಟ್ಟಿರತಕ್ಕ ನೀರು ಎಷ್ಟು ಎಕರೆಗೆ ಆಗಿದೆ ಅಂದರೆ ೩೩ ಸಾವಿರ ಎಕರೆ, ಎಂದು ಹೇಳಿದ್ದೀರಿ. ಇದು ಹೇಗಾಗಿದೆ ಎಂದರೆ ಬಕಾಸುರನ ಹೊಟ್ಟೆಗೆ ೩ ಕಾಸಿನ ಮಜ್ಜಿಗೆ ಎನ್ನುವ ಗಾದೆಯ ತರಹ ಇದೆ. ಇದೇ ರೀತಿ ಎಲ್ಲಾ ಯೋಜನೆಗಳಲ್ಲೂ ಆಗಿದೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಮತ್ತು ರೈತರಿಗೆ ಏನಾದರೂ ಉಪಯೋಗ ವಾಗಿದೆಯೇ ? ಆದುದರಿಂದ ಇದು ಕೇವಲ ಮನಸ್ಸಿಗೆ ತೃಪ್ತಿಯಾಗುವ ಕೆಲಸವಾಗಿದೆಯೇ ಹೊರತು ಯಾರಿಗೂ ಇದರಿಂದ ಉಪಯೋಗವಾಗಿಲ್ಲ. ಆದುದರಿಂದ ಇದರ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರಿ ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಮಾನ್ಯ ಸದಸ್ಯರು ಹೇಮಾವತಿ ಪ್ರಾಜೆಕ್ಟ್‌ನ ಬಗ್ಗೆ ಉದಾಹರಣೆ ಯನ್ನು ಕೊಟ್ಟಿದ್ದಾರೆ. ಈ ಡ್ಯಾಂ ಜೋನಲ್‌ಗಾಗಿ ನಾವು ಸುಮಾರು ೪೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರಲ್ಲಿ ಕೆನಾಲ್‌ಗೋಸ್ಕರವಾಗಿ ಸುಮಾರು ೧೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಡ್ಯಾಮನ್ನು ಕಟ್ಟಿದ ಮೇಲೆಯೇ ನಾವು ಕೆನಾಲನ್ನು ಪೂರ್ತಿಗೊಳಿಸಬೇಕಾಗಿರು ತ್ತದೆ. ಈಗ ಕೆ.ಪಲ ೩೪ ಸಾವಿರ ಎಕರೆ ಅಚ್ಚುಕಟ್ಟಿನ ಪ್ರದೇಶಕ್ಕೆ ನೀರಾವರಿಯಾಗಿದೆ. ಆದುದರಿಂದ ಇನ್ನೂ ಹೆಚ್ಚಿನ ಹಣ ಕೊಟ್ಟು ಕೆನಾಲ್ ವರ್ಕ್‌ನ್ನು ಮುಗಿಸಬೇಕೆಂದು ಇದ್ದೇವೆ.

ಶ್ರೀ ಎಚ್. ಗಂಗಾಧರನ್.—ಕೆರೆ ಕಟ್ಟಿದ್ದೀರಿ ಕಾಲುವೆಗಳನ್ನು ಮಾಡಿಲ್ಲ. ಅದಕ್ಕೆ ಇನ್ನೂ ಹೆಚ್ಚಿನ ಹಣ ಬೇಕಾಗುತ್ತದೆಂದು ಹೇಳಿಕೆ ಕೊಟ್ಟಿದ್ದೀರಿ. ಕಾಲುವೆಗಳು ಆಗುವುದಕ್ಕಿಂತ ಮುಂಚಿತವಾಗಿಯೇ ಹೇಮಾವತಿ ಮತ್ತು ಕಬಿನಿ ಪ್ರಾಜೆಕ್ಟ್‌ಗಳಲ್ಲಿ ಲೀಕೇಜ್ ಆಗುತ್ತಿದೆಯೆಂದು ಹೇಳಿದರೆ ಅದಕ್ಕೆ ಯಾರು ಕಾರಣ ? ಲೀಕೇಜ್ ಆಗುವುದು ಕ್ವಾಲಿಟಿ ಕಂಟ್ರೋಲ್‌ರವರಿಗೆ ಗೊತ್ತಿರಲಿಲ್ಲವೇ ? ಈ ಲೀಕೇಜನ್ನು ಸ್ಟಾಪ್ ಮಾಡುವುದಕ್ಕೆ ಇನ್ನು ಎಷ್ಟು ಹಣ ಬೇಕಾಗುತ್ತದೆ ? ಹೀಗೆಯೇ ಇದು ಲೀಕೇಜ್ ಆಗುತ್ತಿದ್ದರೆ ಯಾವಾಗ ಕಟ್ಟೆ ಒಡೆಯುತ್ತದೆಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಮಾನ್ಯ ಅಧ್ಯಕ್ಷರೇ, ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಲೀಕೇಜ್ ಆಗುತ್ತಿಲ್ಲ. ಭದ್ರಾ ಪ್ರಾಜೆಕ್ಟ್‌ನಲ್ಲಿ ಲೀಕೇಜ್ ಆಗುತ್ತಿದೆ ಎಂಬ ಒಂದು ಪ್ರಶ್ನೆ ಬಂದಾಗ ಆ ರೀತಿಯಾಗಿ ಹೇಳಿದ್ದೆ. ಆದರೆ ಹೇಮಾವತಿಯಲ್ಲಿ ವೈನರ್ ಆಗಿ ಸೀಪೇಜ್ ಆಗುತ್ತಿದೆ. ಅದಕ್ಕೆ ಡ್ರೈನೇಜ್ ಗ್ಯಾಲರಿಯಲ್ಲಿ ಇಷ್ಟು ಪ್ರಮಾಣದಲ್ಲಿ ನೀರು ಬಿಡಬೇಕು ಎಂದು ಇದೆ. ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಟ್ಟರೆ ಸ್ವಲ್ಪ ಸೀಪೇಜ್ ಆಗಿದೆ. ಆದಕ್ಕೋಸ್ಕರವಾಗಿ ಅದನ್ನು ನಾವು ಕಾಂಕ್ರೀಟಿಂಗ್ ಮಾಡಿ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಹೇಮಾವತಿ ಪ್ರಾಜೆಕ್ಟ್‌ಗೆ ಹೆಚ್ಚಿನ ಸಿಬ್ಬಂದಿ ಕೊಡುವುದಕ್ಕೆ ಸರ್ಕಾರದವರಿಗೆ ಇರತಕ್ಕಂಥ ಆತಂಕವಾದರೂ ಏನು? ಮತ್ತೆ ಹೇಮಾವತಿಯ ಚೀಫ್ ಇಂಜಿನಿಯರ್‌ರವರು ಅಲ್ಲಿಗೆ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗಿದ್ದರೆ ೭ ಡಿವಿಜನ್ ಕೊಡಿ ಎಂದು ಒಂದು ಪ್ರಪೋಜಲನ್ನು ಕಳುಹಿಸಿ ಕೊಟ್ಟಿದ್ದಾರೆ ಅದರಲ್ಲಿ ನೀವು ಎಷ್ಟು ಡಿವಿಜನ್ ಕೊಟ್ಟಿದ್ದೀರಿ ಮತ್ತೆ ರೈಟ್ ಬ್ಯಾಂಕ್‌ಗೆ ಒಂದು ಡಿವಿಜನ್ ತಗೆಯಬೇಕೆಂದು ಹೇಳಿದ್ದಾರೆ. ಆದರಲ್ಲಿ ತಾವು ಎಷ್ಟಕ್ಕೆ ಮಾನ್ಯತೆ ನೀಡಿದ್ದೀರಿ. ಆ ರೀತಿ ಮಾನ್ಯತೆ ಕೊಡದಿದ್ದರೆ ಅದಕ್ಕೆ ಕಾರಣವೇನು, ಏನು ಆತಂಕವಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ.—ಅಲ್ಲಿಗೆ ಒಂದು ಸರ್ಕ್ಯೂಲರ್ ಡಿವಿಜನ್ ಮತ್ತು ೪ ಡಿವಿಜನ್ ಮತ್ತು ೧೬ ಸಬ್ ಡಿವಿಜನನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ರೈಟ್ ಬ್ಯಾಂಕ್‌ಗೆ ಒಂದು ಡಿವಿಜನ್ ಕೊಡಬೇಕು. ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದ್ದರೆ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಬೇಕು ಎನ್ನತಕ್ಕದರ ಬಗ್ಗೆ ಇವರು ಲೆಕ್ಕಾಚಾರ ಮಾಡಿ ಅದಕ್ಕೆ ತಕ್ಕಂತೆ ಸಿಬ್ಬಂದಿಯನ್ನೂ ಸಹಕೊಡ ಬೇಕೆಂದು ಪ್ರಪೋಜಲ್ ಮಾಡಿದ್ದಾರೆ. ಅವರು ೫ ಡಿವಿಜನ್ಸ್ ಕೇಳಿದರೆ ನೀವು ೪ ಡಿವಿಜನ್ ಕೊಟ್ಟಿದ್ದೀರಿ, ಇನ್ನೊಂದು ಡಿವಿಜನ್ ಕೊಡುವುದಕ್ಕೆ ಸರ್ಕಾರಕ್ಕೆ ಇರತಕ್ಕಂಥ ಆತಂಕವಾದರೂ ಏನು? ಚೀಫ್ ಇಂಜಿನಿಯರ್‌ರವರು ಕಳುಹಿಸಿರತಕ್ಕಂಥ ಪ್ರಪೋಜಲ್‌ನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟವೇನಿದೆ ಎಂಬುದನ್ನು ದಯಮಾಡಿ ತಿಳಿಸಿ.

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—೫ ಡಿವಿಜನ್ ಕೇಳಿದ್ದಾರೆ ಅದರಲ್ಲಿ ನಾವು ೪ ಡಿವಿಜನ್ ಕೊಟ್ಟಿದ್ದೇವೆ. ಅಲ್ಲಿಗೆ ಎಷ್ಟು ಜನ ಸಿಬ್ಬಂದಿ ಬೇಕಾಗುತ್ತದೆ ಎನ್ನುವ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟಿನವರ ಜೊತೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ಆದರೂ ಕೂಡ ಮಾನ್ಯ ಸದಸ್ಯರು ಅಲ್ಲಿಗೆ ಇನ್ನೂ ಒಂದು ಹೆಚ್ಚಿಗೆ ಡಿವಿಜನ್ ಬೇಕು ಎಂದು ಹೇಳುತ್ತಿರುವುದರಿಂದ ಅದರ ಬಗ್ಗೆ ಕೂಡ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿ ವರ್ಕ್‌ಲೋಡ್ ಜಾಸ್ತಿಯಾಗಿರುವುದರಿಂದ ನೀವು ಕೊಟ್ಟಂಥ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರವಾಗಿಯೇ ಚೀಫ್ ಇಂಜಿನಿಯರ್‌ರವರು ಅಲ್ಲಿಗೆ ಹೆಚ್ಚಿಗೆ ಸಿಬ್ಬಂದಿ ಬೇಕು ಎಂದರೆ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಏತಕ್ಕೆ ಕೊಡುವುದಿಲ್ಲವೆಂದು ಹೇಳುತ್ತಾರೆ? ಆದುದರಿಂದ ತಾವು ಅದನ್ನು ಏತಕ್ಕೆ ಮಂಜೂರು ಮಾಡಬಾರದು?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ನಾವು ಅಂದುಕೊಂಡಿರುವ ಮಟ್ಟಿಗೆ ಈಗ ಏನು ೪ ಡಿವಿಜನ್ ಕೊಟ್ಟಿದ್ದೇವೆ ಆದರ ಮುಖಾಂತರವಾಗಿಯೇ ಕೊಟ್ಟಿರತಕ್ಕ ಹಣದಲ್ಲಿ ಒಂದು ನಯಾಪೈಸೆ ಕೂಡ ಲ್ಯಾಪ್ಸ್ ಆಗದ ರೀತಿಯಲ್ಲಿ ಜವಾಬ್ದಾರಿಯನ್ನು ಹೊತ್ತಿದ್ದೇವೆ, ಲ್ಯಾಪ್ಸ್ ಆಗದ ರೀತಿಯಲ್ಲಿ ನೋಡುತ್ತೇವೆ. ಚೀಫ್ ಇಂಜಿನೀಯರ್‌ರವರು ಕೇಳಿದ್ದಾರೆಂದಾಕ್ಷಣ ಒಮ್ಮಿಂದೊಮ್ಮೆಲೇ ಎಲ್ಲಾ ಸ್ಯಾಂಕ್ಷನ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಿ. ಶಿವಯ್ಯ.—ಈ ರಾಜ್ಯದ ಸಂಪತ್ತನ್ನು ಹೆಚ್ಚಿಸುವ ದೃಷ್ಟಿಯಿಂದ ನಮ್ಮಲ್ಲಿರತಕ್ಕ ೩-೪ ನೀರಾವರಿ ಯೋಜನೆಗಳ ಕಾಲುವೆಗಳನ್ನು ನಿರ್ದಿಷ್ಟವಾದ ಅವಧಿಯಲ್ಲಿ ಪೂರ್ತಿಗೊಳಿಸಲು ಸರ್ಕಾರ ಪ್ರಯತ್ನ ಮಾಡುತ್ತದೆಯೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಎಲ್ಲ ಸದಸ್ಯರುಗಳ ಸಹಕಾರವಿದ್ದು ಈ ಯೋಜನೆಗಳಿಗೆ ಹೆಚ್ಚಿನ ಹಣ ಒದಗಿಸುವುದಾದರೆ ತಾವು ಹೇಳಿದ ಪ್ರಕಾರ ನಿರ್ದಿಷ್ಟವಾದ ಅವಧಿಯಲ್ಲಿ ಯೋಜನೆಗಳನ್ನು ಪೂರ್ತಿಗೊಳಿಸುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.—ವಿಚಾರವನ್ನು ಸದಸ್ಯರ ಮುಂದಿಟ್ಟರೆ ಸಲಹೆ ಕೊಡುತ್ತೇವೆ. ನಿಮ್ಮ ಸರ್ಕಾರದ ಪ್ರಯತ್ನ ಆ ರೀತಿ ಇದೆಯೆ ?

ಶ್ರೀ ಬಿ. ಬಿ ಚಿಮ್ಮನ ಕಟ್ಟಿ.—ಸರ್ಕಾರಕ್ಕೆ ಆಸೆ ಇದ್ದರೂ ಎಲ್ಲ ಸದಸ್ಯರು ಅದಕ್ಕೆ ಒಪ್ಪಿಗೆ ಕೊಡ ಬೇಕಲ್ಲ. ನನ್ನ ಇಲಾಖೆಗೆ ೪೦೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳುತ್ತೇನೆ. ಅದೇ ರೀತಿ ಬೇರೆ ಬೇರೆ ಇಲಾಖೆಯವರು ಕೇಳುತ್ತಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಎಲ್ಲ ಸದಸ್ಯರನ್ನು ತೃಪ್ತಿಪಡಿಸುವುದಕ್ಕೆ ಹೋದರೆ ತಿರುಪತಿ ಚೌರವಾಗುತ್ತದೆ.

ಶ್ರೀ ಎಂ. ಗಂಗಣ್ಣ.—ಅನೇಕ ಯೋಜನೆಗಳು ಪೂರ್ಣಗೊಳ್ಳುವಾಗ ಇಂತಿಷ್ಟು ಎಕರೆಗೆ ನೀರಾವರಿ ಸೌಲಭ್ಯ ಒದಗಬಹುದೆಂದು ಅಂದಾಜು ಮಾಡಿರುತ್ತಾರೆ. ಆ ರೀತಿ ಏನಾದರೂ ಅಂದಾಜು ಮಾಡಿದ್ದೀರಾ? ಮಾಡಿದ್ದರೆ ಎಷ್ಟು ಮಾಡಿದ್ದೀರಿ ? ಎಷ್ಟು ಯೋಜನೆಗಳು ಪೂರ್ಣವಾಗಿವೆ ? ಈ ದಿಸೆಯಲ್ಲಿ ಏನಾದರೂ ಸಮೀಕ್ಷೆ ಮಾಡಿ ಯೋಜನೆಯ ಅಂದಾಜು ಎಷ್ಟು ಮತ್ತು ಅದರಿಂದಾಗತಕ್ಕ ಪ್ರಯೋಜನ ಎಷ್ಟು ಎಂಬುದನ್ನೇನಾದರೂ ಲೆಕ್ಕ ಹಾಕಿದ್ದೀರಾ ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಉದಾಹರಣೆಗೆ, ಭದ್ರ ಯೋಜನೆ ೧೯೬೭ ರಲ್ಲಿ ಪೂರ್ಣವಾಗಿದೆ. ಆದರೂ ಚಾನಲ್ ಕೆಲಸ ಪೂರ್ಣವಾಗಿಲ್ಲ. ಕಾರಣ, ಕೆಲವು ತಾಂತ್ರಿಕ ತೊಂದರೆಗಳಿಂದ ನಿಧಾನವಾಗಿದೆ. ಎಲ್ಲ ಪ್ರದೇಶಗಳನ್ನು ನೀರಾವರಿ ಪ್ರದೇಶಗಳನ್ನಾಗಿ ಮಾಡುವುದಕ್ಕೆ ಆಗದಿದ್ದರೂ, ಚಾನಲ್ ಕೆಲಸವನ್ನು ಪೂರ್ತಿ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ, ಮಾಡಿಸುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಂತ್ರಿಗಳು ನಾನು ಕೇಳಿದ ಎಲ್ಲ ಪ್ರಶ್ನೆಗಳಿಗೂ ಒಪ್ಪಿಕೊಂಡಿದ್ದಾರೆ. ಆ ಕಾರಣದಿಂದ ತಮ್ಮ ಯೋಜನೆಗಳನ್ನು ಪುನರಾವರ್ತನೆ (ಪರಿಷ್ಕರಣ) ಮಾಡು ತ್ತೀರಾ ?

ಅಧ್ಯಕ್ಷರು.—ತಾವು ಅಂದಾಜು ಸಮಿತಿಯ ಅಧ್ಯಕ್ಷರಾಗಿದ್ದೀರಿ. ತಾವು ಅಧ್ಯಯನ ಮಾಡಿ ಸರ್ಕಾರಕ್ಕೆ ಸಲಹೆ ಮಾಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಯನ ಮಾಡಿ ಆಗಿದೆ. ಆದರೆ ನಾವು ವರದಿ ಕೊಡುವುದರೊಳಗೆ ನಮ್ಮನ್ನು ತೆಗೆಯುತ್ತಾರಲ್ಲ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು—ವರದಿ ಕೊಡುವವರೆಗೆ ಇಟ್ಟುಕೊಂಡು ಕೆಲಸ ತೆಗೆಸಿಕೊಳ್ಳಿರುತ್ತಾರೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಣೆಕಟ್ಟುಗಳ ಕೆಲಸ ಪೂರ್ಣವಾಗಿದೆ, ಇನ್ನು ಮಾಡಬೇಕಾ ಗಿರುವುದು ಕಾಲುವೆಗಳ ಕೆಲಸ ಅಷ್ಟೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಂತ್ರಿಗಳು ಬಹಳ ಉತ್ಸಾಹದಿಂದ ಎಲ್ಲ ಹಣವನ್ನು ಖರ್ಚು ಮಾಡಿಸುತ್ತೇವೆಂದು ಹೇಳಿದರು. ಬರೀ ಹಣವನ್ನು ಖರ್ಚು ಮಾಡುವುದು ನಿಮ್ಮ ಕರ್ತವ್ಯವಲ್ಲ ಎಂಬುದನ್ನು ತಿಳಿದುಕೊಳ್ಳಬೇಕು ಡ್ಯಾಂನಲ್ಲಿ ಸೀಪೇಜ್ ಬಹಳ ಬರುತ್ತಿದೆ ಎಂದರು. Spending is not the only concern of the Government. The money that is going to be spent must be properly spent That is why necessary establishment is required. ಮುಂಖ್ಯ ಇಂಜಿನಿಯರ್ ಆಗಲೀ ಅಥವಾ ನೀವೇ ಆಗಲಿ ವಿಧಾನಸೌಧದಲ್ಲಿ ಕುಳಿತುಕೊಂಡು ಹಣ ಖರ್ಚು ಮಾಡುವುದು ದೊಡ್ಡದಲ್ಲ; ಅದನ್ನು ಯಾರು ಬೇಕಾದರೂ ಮಾಡುತ್ತಾರೆ. ಅಲ್ಲಿಗೆ ಎಷ್ಟು ಹಣ ಬೇಕು, ಎಷ್ಟು ಸಿಬ್ಬಂದಿ ವರ್ಗ ಬೇಕೆಂಬುದನ್ನು ನಿರ್ಣಯಿಸತಕ್ಕದ್ದು ಇಲಾಖೆಯ ಮುಖ್ಯ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಆದುದರಿಂದ, ಆ ದಿಸೆಯಲ್ಲಿ ಅದನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಸರ್ಕಾರಕ್ಕೆ ಮತ್ತೆ ಆ ಹಣ ವಾಪಸ್ಸು ಹೋಗಬಾರದೆಂದು ಮಾನ್ಯ ಸದಸ್ಯರು ಅಭಿಪ್ರಾಯಪಡುತ್ತಿದ್ದಾರೆ. ಪೂರ್ತಿ ಹಣ ಖರ್ಚಾಗುವುದಕ್ಕೆ ಏನೇನು ವ್ಯವಸ್ಥೆ ಮಾಡಬೇಕೋ ಅದನ್ನೆಲ್ಲಾ ಮಾಡುತ್ತೇವೆಂದು ಹೇಳಿದ್ದೇವೆ. ಕೆಲಸದ ಗುಣಮಟ್ಟದ ಬಗ್ಗೆ ಸರ್ಕಾರ ಕಾಳಜಿ ವಹಿಸಿ ಅವ್ಯವಹಾರ ಆಗದಂತೆ ನೋಡಿಕೊಳ್ಳುವ ದಿಸೆಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ.—ಚಿಕ್ಕನಾಯಕನ ಹಳ್ಳಿಯ ಜಲಾಶಯದ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದು ಬೇರೆ ಪ್ರಶ್ನೆ.

ಶ್ರೀ ಎಸ್. ಎಂ ಶೀರಾ ಳಿ ಚಂದ್ರಶೇಖರ್.—ತಾವು ನನ್ನ ಪ್ರಶ್ನೆಗೆ ಒಪ್ಪಿದ್ದೀರಿ. ಚಾನಲ್ ಕೆಲಸ ಬಹಳ ಕಾಲವನ್ನು ತೆಗೆದುಕೊಳ್ಳುವುದರಿಂದ ಡಿಲೇ ಆಗುತ್ತಿದೆ ಎಂದು ಹೇಳಿದ್ದೀರಿ. ಆದುದರಿಂದ, ಮೊದಲು ಚಾನಲ್ ಕೆಲಸವನ್ನು ಪ್ರಾರಂಭಿಸಿ, ಆದನ್ನು ಮುಗಿಸಿದ ನಂತರ ಡ್ಯಾಂ ಅನ್ನು ಕಟ್ಟುವು ದಕ್ಕಾಗುವುದಿಲ್ಲವೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈಗ ಎಲ್ಲ ಡ್ಯಾಂಗಳನ್ನು ಕಟ್ಟಿದ್ದೇವೆ, ಇನ್ನು ಮಾಡಬೇಕಾಗಿರು ವುದು ಚಾನಲ್ ಕೆಲಸ ಅಷ್ಟೆ.

ಶ್ರೀ ಪಂಪಾಪತಿ.—ಮಂತ್ರಿಗಳು ಎಲ್ಲ ಡ್ಯಾಂ ಕೆಲಸ ಮುಗಿದಿದೆ ಅನ್ನುತ್ತಾರೆ. ಆದರೆ ನಮ್ಮ ಸರಿಹರ ತಾಲ್ಲೂಕಿನಲ್ಲಿರತಕ್ಕ ಡ್ಯಾಂ ಕೆಲಸ ಕಳೆದ ೨೦ ವರ್ಷಗಳಿಂದ ನಡೆದಿದ್ದು ಅರ್ಧಕ್ಕೆ ನಿಂತಿದೆ. ಅದು ಪೂರ್ತಿಯಾಗದಿರಲು ಕಾರಣವೇನು ?

ಅಧ್ಯಕ್ಷರು.—ಅದು ಪಿಕ್‌ಅಪ್.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕಂಟ್ರಾಕ್ಟರು ಕೋರ್ಟಿಗೆ ಹೋದದ್ದರಿಂದ ಕೆಲಸ ಹಾಗೇ ನಿಂತಿತು. ಈಗ ನಾವು ಕಂಟ್ರಾಕ್ಟರನ್ನು ಕರೆದು ತೀರ್ಮಾನ ಮಾಡಿದ್ದೇವೆ. ಇನ್ನು ಕೆಲಸ ಪ್ರಾರಂಭವಾಗುತ್ತವೆ.

Compensation to the ryots

955 SRI G. RAJU GOWDA (Hanur).—Will the Minister for Revenue be pleased to state.—

(a) whether the lands of ryots are acquired for Right Bank Canal and Left Bank Canal of Gundal Reservoir 10 years back;

(b) if so, whether compensation has been paid to them;

(c) if not, the reasons for delay?

SRI MALLIKARJUNA M. KHARGE.Minister for Revenue

(*ii*) *Re*; *New Procedure for admission to Engineering Courses*

(a) In 3 cases acquisition proceedings are completed and in other 5 cases accquisition proceedings are still in progress.

(b) No

(c) Out of 8 cases relating to acquisition of land for Right Bank and Left Bank Canals of Gundal Reservoir Project. in 3 cases awards have been approved by the Special Deputy Commissioner, Mysore and the Chief Engineer (Irrigation) Mysore has been requested to release the funds, which is still awaited.

In respect of other 5 cases, they are pending at various stages and acquisition proceedings are not yet completed.

ಶ್ರೀ ಜಿ. ರಾಜೂಗೌಡ.—ನನ್ನ ಪ್ರಶ್ನೆ ಏನೆಂದರೆ, ಭೂಸ್ವಾಧೀನಪಡಿಸಿಕೊಂಡಿದ್ದರೂ ಏತಕ್ಕೆ ಇದುವರೆಗೆ ಪರಿಹಾರ ಧನವನ್ನು ಕೊಡಲಿಲ್ಲ ಎಂಬುದು. ಪರಿಹಾರ ಹಣವನ್ನು ಆದಷ್ಟು ಜಾಗ್ರತೆ